ಮಂಡ್ಯ ನಗರದಲ್ಲಿ ಕೊಳಚೆ ನಿವಾಸಿಗಳಿಗಾಗಿ ಮನೆಗಳು

750 (228) ಶ್ರೀ ಶ್ರೀನಿವಾಸ್ ಎಂ (ಮಂಡ್ಯ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಮಂಡ್ಯ ನಗರದಲ್ಲಿ ಕೊಳಚೆ ನಿವಾಸಿಗಳಿಗಾಗಿ ಮನೆಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಕೊಳಚೆ ನಿವಾಸಿಗಳಿಗಾಗಿ ಅಗತ್ಯವಾಗಿರುವ ಮನೆಗಳನ್ನು ನಿರ್ಮಿಸಲು ವಿಳಂಬ ಮಾಡುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ ಕೊಳಚೆ ನಿವಾಸಿಗಳಿಗೆ ಯಾವಾಗ ಮನೆ ಹಂಚಿಕೆ ಮಾಡಲಾಗುವುದು? (ಪೂರ್ಣ ಮಾಹಿತಿ ನೀಡುವುದು)

ಶ್ರೀ ವಿ. ಸೋಮಣ್ಣ (ವಸತಿ ಸಚಿವರು) :

ಅ) ಹೌದು.

ಮಂಡ್ಯ ನಗರದಲ್ಲಿನ ಕೊಳಚೆ ಪ್ರದೇಶದ ನಿವಾಸಿಗಳಿಗಾಗಿ ಕೇಂದ್ರ ಸರ್ಕಾರದ Jn NURM-IHSDP ಯೋಜನೆಯಡಿ 2008–09ನೇ ಸಾಲಿನಲ್ಲಿ ಮಂಡ್ಯ ನಗರದ ತಮಿಳಿಯನ್ ಕಾಲೋನಿ (378), ಡೌರಿ ಸಮಾಜ (40), ವೇಣುಗೋಪಾಲ್‌ಸ್ವಾಮಿ ಶಿಶು ವಿಹಾರ ಹತ್ತಿರದ ಕೊಳಚೆ ಪ್ರದೇಶ (60) ಮತ್ತು ನಾಲಬಂದವಾಡಿ (80) ಕೊಳಚೆ ಪ್ರದೇಶದ ನಿವಾಸಿಗಳಿಗೆ ಮೂಲಭೂತ ಸೌಲಭ್ಯಗಳೊಂದಿಗೆ ಒಟ್ಟು 558 ಮನೆಗಳ ನಿರ್ಮಾಣದ ಯೋಜನೆಯನ್ನು ರೂ.1423.45 ಲಕ್ಷಗಳ ಅಂದಾಜು ಮೊತ್ತದಲ್ಲಿ ಮಂಡಳಿ ವತಿಯಿಂದ ಕೈಗೆತ್ತಿಕೊಳ್ಳಲಾಗಿದೆ ಈ ಪೈಕಿ ತಮಿಳಿಯನ್ ಕಾಲೋನಿ ಕೊಳಚೆ ಪ್ರದೇಶದ ನಿವಾಸಿಗಳಿಗೆ 378 ಮನೆಗಳ ಕಾಮಗಾರಿಗಳನ್ನು ಮಾನ್ಯ ಉಚ್ಚನ್ಯಾಯಾಲಯದ ದಿನಾಂಕ: 19.10.2010ರ ತಡೆ ಆಜ್ಞೇ ಆದೇಶದನ್ವಯ ಸ್ಥಗಿತಗೊಳಿಸಲಾಗುತ್ತದೆ. ಉಳಿದ ಕೊಳಚೆ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣದ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನದ ಲಭ್ಯತೆ ಮೇರೆಗೆ ಮನೆಗಳ ನಿರ್ಮಾಣಕ್ಕೆ ಹೊಸ ಯೋಜನೆಗಳನ್ನು ರೂಪಿಸಲಾಗುವುದು.

ಆ) 1. ಇಲ್ಲ.

2. ತಮಿಳಿಯನ್ ಕಾಲೋನಿ ಕೊಳಚೆ ಪ್ರದೇಶದಲ್ಲಿ 378 ಮನೆಗಳ ನಿರ್ಮಾಣದ ಕಾಮಗಾರಿಗಳು ಮಾನ್ಯ ಉಚ್ಚನ್ಯಾಯಾಲಯದ ದಿನಾಂಕ: 19.10.2010ರ ತಡೆಯಾಜ್ಞೆ ಆದೇಶದನ್ವಯ ಸ್ಥಗಿತಗೊಳಿಸಲಾಗುತ್ತದೆ. ದಿನಾಂಕ: 1/3/2012ರ ಸರ್ಕಾರದ ನಡವಳಿಯಂತೆ ಸದರಿ 378 ಮನೆಗಳನ್ನು ಮಂಡ್ಯ ನಗರದಲ್ಲಿ ಅವಶ್ಯಕತೆ ಇರುವ ಕೊಳಚೆ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.

3. ಡೌರಿ ಸಮಾಜ ಮತ್ತು ವೇಣುಗೋಪಾಲ್ ಸ್ವಾಮಿ ಶಿಶು ವಿಹಾರ ಹತ್ತಿರದ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮೂಲಭೂತ ಸೌಲಭ್ಯಗಳೊಂದಿಗೆ ಕ್ರಮವಾಗಿ 40 ಮತ್ತು 60 ಮನೆಗಳ ನಿರ್ಮಾಣದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತವೆ.

4. ನಾಲಬಂದವಾಡಿ ಕೊಳಚೆ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 80 ಮನೆಗಳ ನಿರ್ಮಾಣದ ಕಾಮಗಾರಿಗಳು ಸ್ಥಳದ ಸಮಸ್ಯೆಯಿಂದಾಗಿ ವಿಳಂಬವಾಗಿ ಪ್ರಾರಂಭ ಮಾಡಲಾಗಿದ್ದು, ಇವುಗಳಲ್ಲಿ 16 ಮನೆಗಳು ಛಾವಣಿ ಹಂತದಲ್ಲಿರುತ್ತದೆ ಉಳಿದ 64 ಮನೆಗಳ ನಿರ್ಮಾಣವನ್ನು ಮೂಲಭೂತ ಸೌಲಭ್ಯಗಳೊಂದಿಗೆ ಮಾರ್ಚ್ 2013 ರೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಇ) 558 ಮನೆಗಳ ಪೈಕಿ ಡೌರಿ ಸಮಾಜ (40) ಮತ್ತು ವೇಣುಗೋಪಾಲ್‌ಸ್ವಾಮಿ ಶಿಶು ವಿಹಾರ ಹತ್ತಿರದ ಕೊಳಚೆ ಪ್ರದೇಶ (60), ಒಟ್ಟು 100 ಮನೆಗಳ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು ಸದರಿ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮಂಡಳಿಯ ನಿಯಮಾನುಸಾರ ಮನೆಗಳನ್ನು ಹಂಚಿಕೆ ಮಾಡಲು ಕ್ರಮಕೈಗೊಳ್ಳಲಾಗುವುದು. ಉಳಿದ 458 ಮನೆಗಳ ನಿರ್ಮಾಣದಲ್ಲಿ ಇರುವ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಮಾರ್ಚ್ 2013 ರೊಳಗೆ ಎಲ್ಲಾ ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು.